A.— Sri VEERENDRA PATIL (Minister for Public Works).—

(*a*) No.
(*b*) Does not arise.

Sri D. PARAMESHWARAPPA.—Is there any proposal before Government to raise this Tunga Anicut by 8 ft. ?

†Sri VEERENDRA PATIL.—Sir, there is a proposal to raise the level of Tunga anicut *i.e.*, we are just examining the possibility of impounding more water by fixing the crest gates; that is under investigation.

Sri D. PARAMESHWARAPPA.—If that proposal is going to materialise, will the Government think of constructing a feeder channel from Tunga anicut to Sowlang a tank to that it may irrigate more and more acres in Honnali taluk ?

Sri VEERENDRA PATIL.—From the study of the topo sheet, it is revealed that this tank which referred to by the hon. member is at a higher level and the level would not permit.

Mr. SPEAKER.—Question hour is over.

PANEL OF CHAIRMEN

Mr. SPEAKER.—I have an announcement to make. Under rule 9 of the Rules of Procedure and Conduct of Business in the Mysore Legislative Assembly the following members will form the panel of Chairmen for the current session :

Smt. Basavarajeswari
Sri S. D. Kothavale
Sri M. Nagappa
Sri K. M. Thammiah

2-00 P.M.

Members' Representation

ಶ್ರೀ ಪಿ. ವಿ. ಐತಾಳ (ನೂರತ್ಕರ್).—ರೂಲ್ 177 ಪ್ರಕಾರ ನಾನು ಒಂದು ಪ್ರಿವಿಲೇಜ್ ಮೋಷನ್ ಕಳಿಸಿದ್ದೇನೆ, ಅದನ್ನು ಗಮನಕ್ಕೆ ತರುತ್ತೇನೆ.

Mr. SPEAKER.—The member will kindly read that rule.

Sri P. V. AITHALA.— " A member may, with the consent of the Speaker, raise a question..."

Mr. SPEAKER.—Has the member obtained the consent of the Speaker.

Sri P. V. AITHALA.—I am asking for it.

Mr. SPEAKER.—For asking for consent, certain procedure has to be followed. I called the hon'ble member just before coming to the da s and have asked him to meet me at 3 P.M.

ಶ್ರೀ ಪಿ. ವಿ. ಐತಾಳ.—ನಾನು ಕೊಟ್ಟದ್ದು ಪ್ರಿವಿಲೆಜ್ ಮೋಷನ್ ಆಗುವುದಿಲ್ಲ ಎಂದು ತಾವು ಹೇಳಿದಿರಿ. ಆದುದರಿಂದ ಇದಕ್ಕೆ ಪರ್ಮಿಷನ್ ಕೊಡುವುದಿಲ್ಲ ಎಂದು ಹೇಳಿದಿರಿ. ಇದನ್ನು ಯಾವ ಆಧಾರದಿಂದ ಹೇಳಿದಿರಿ ? ಮೂರು ಗಂಟೆಗೆ ಬನ್ನಿ ಮಾತನಾಡೋಣ ಎಂದು ಏತಕ್ಕೆ ಹೇಳಿದಿರಿ ?

Mr. SPEAKER.—I am not here for cross-examination. If the member wants information, he may kindly come and meet me.

ಶ್ರಿ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ವಿಧಾನ ಸೌಧದ ಹೊರಗಡೆ ದಲಿತ ವರ್ಗದವರು ಕೆಲವರು ಚಳವಳಿ ಮಾಡುತ್ತಿದ್ದು ಸಚಿವರುಗಳನ್ನು ಮಾನ್ಯ ಸದಸ್ಯರುಗಳನ್ನು ಘೇರಾವೋ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಸ್ಟೇಟ್‌ಮೆಂಟ್ ಕೊಡುತ್ತಾರೆಯೇ ? ಈ ಬಗ್ಗೆ ಚರ್ಚೆಸಲು ಅವಕಾಶ ಕೊಡಬೇಕು ಎಂದು ಇದನ್ನು ಸಭೆಯ ಗಮನಕ್ಕೆ ತರುತ್ತೇನೆ.

Mr. SPEAKER.—Are members to get up and speak whatever they like ? Are there no rules ? Members will kindly tell me, beforehand. If there is anything, why not the hon'ble member come and tell me ? I cannot allow the hon'ble member to raise it here ? I am trying to give utmost co-operation to the members.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ವಿಧಾನ ಸೌಧದ ಎದುರಿಗೇ ನಡೆಯುತಕ್ಕಂಥ ಘಟನೆ ಬಗ್ಗೆ ಇಂಥ ವಿಷಯವನ್ನು ಸಭೆಯ ಮುಂದೆ ತರದೇ ಇದ್ದರೆ ಇನ್ನೇನು ತರಬೇಕು ? ಪ್ರಿವಿಲೆಜ್ ಮೋಷನ್ ಅಂದರೆ ಹಕ್ಕು ಬಾಧ್ಯತೆ ವಿಷಯ ಬಹು ಮುಖ್ಯವಾದುದು. ಅದರ ಬಗ್ಗೆ ಮೂರು ಗಂಟೆಗೆ ಮಾತನಾಡೋಣ ಎಂದು ಹೇಳಿದಿರಿ. ಅವರು ತಮ್ಮ ವಿಚಾರ ಹೇಳಲಿ. ಯಾಕೆಂದರೆ ಇದು ಆತ್ಮ ಗೌರವಕ್ಕೆ ಸಂಬಂಧಪಟ್ಟದ್ದು.

Mr. SPEAKER.—Order, order. Is that the attitude of the Leader of the Opposition—that we need not observe the rules ?

Sri S. SIVAPPA.—Let us hear him.

Mr. SPEAKER.—We must hear according to rules. Are we to ignore the rules ?

Sri H. SIDDAVEERAPPA (Harihar).—If I have understood what hon'ble Leader of the Opposition has said, it is before the motion is allowed, no doubt your consent is necessary. But to bring the motion before the House and they say what the motion is, of course if you feel no consent is necessary, you can say what he wants to say. Should not the member have the right to say what the motion is ?

Mr. SPEAKER.—I have said that from the very little he had written, my opinion is that there was no question of privilege. If the hon'ble members want it to be discussed immediately and disposed of...

ಶ್ರೀ ಪಿ. ವಿ. ಐತಾಳ.—ನಾನು ಅಸೆಂಬ್ಲಿ ಸದಸ್ಯನಾಗಿ ನನ್ನ ಕರ್ತವ್ಯವನ್ನು ನಿರ್ವಹಿಸಲು ಹೋಗುವಾಗ, ಒಂದು ಲಕ್ಷ ಜನರ ಪ್ರತಿನಿಧಿಯಾಗಿ ನನ್ನ ಕ್ಷೇತ್ರದ ಜನರ ಪರವಾಗಿ ಮುಖ್ಯ ಮಂತ್ರಿಗಳನ್ನು ನೋಡುವುದಕ್ಕೆ 1-10-67ನೇ ದಿವಸ ಹೋಗುವಾಗ ನನಗೆ ಅವಮಾನ ಮಾಡಿದರು. ಡೆಪ್ಯುಟಿ ಕಮಿಷನರು ಇಂಟರವ್ಯೂ ಗೊತ್ತು ಮಾಡಿದ್ದರು. 200 ಮನೆಗಳನ್ನು ಪೋಲೀಸರ ಸಹಾಯದಿಂದ ತೆಗೆದುಕೊಳ್ಳುವ ವಿಷಯದಲ್ಲಿ ಅವರ ಹತ್ತಿರ ಪೊರೆ ಹೋಗುವುದಕ್ಕೆ ಹೋದಾಗ ನಾಲ್ಕು ಗಂಟೆ wait ಮಾಡಿ...

Mr. SPEAKER.—The member has only to state the point and not deliver the speech. The Member must understand the procedure. Which is the privilege that is violated ?

ಶ್ರೀ ಪಿ. ವಿ. ಐತಾಳ.—ನಾನು ಅಸೆಂಬ್ಲಿ ಮೆಂಬರನಾಗಿ ನನ್ನ ಕರ್ತವ್ಯದಲ್ಲಿ ನಾನು ಮಾತನಾಡುವುದಕ್ಕೆ ಹೋದಾಗ ಇಂಟರವ್ಯೂ ಕೊಡದೆ ಚೀಫ್ ಮಿನಿಸ್ಟರು ಅವಮಾನ ಮಾಡಿದ್ದಾರೆ.

ಅಧ್ಯಕ್ಷರು.—ಪ್ರಿವಿಲೇಜ್ ಏನು ಎಂದು ಹೇಳಿ.

ಶ್ರೀ ಪಿ. ವಿ. ಐತಾಳ.—6-10-67ಕ್ಕೆ ಪಣಂಬೂರಿನಲ್ಲಿ 100-200 ಬಡ ರೈತರನ್ನು ಪೋಲೀಸರ ಸಹಾಯದಿಂದ ಒಕ್ಕಲೆಬ್ಬಿಸುವುದಕ್ಕೆ ನೋಟೀಸ್ ಬಂದಿತ್ತು. ಮುಖ್ಯ ಮಂತ್ರಿಯವರು 1-10-67ಕ್ಕೆ ನಮ್ಮ ಜಿಲ್ಲೆಗ ಬರುತ್ತಾರೆಂದು ತಿಳಿದು ಡೆಪ್ಯುಟಿ ಕಮಿಷನರ್ ಹತ್ತಿರ ಮಾತನಾಡಿ 12 ಗಂಟೆಗೆ ಮುಖ್ಯ ಮಂತ್ರಿಯವರನ್ನು ಇಂಟರವ್ಯೂ ಮಾಡಲು ಕೇಳಿದೆ. ಡೆಪ್ಯುಟಿ ಕಮಿಷನರು ಒಪ್ಪಿದರು. ಅದೇ ರೀತಿ ಸರ್ಕ್ಯೂಟ್ ಹೌಸಿಗೆ ಹೋದಾಗ ಅಲ್ಲಿ ಮುಖ್ಯ ಮಂತ್ರಿಗಳಿರಲಿಲ್ಲ. ಎಲ್ಲಿಗೆ ಹೋಗಿದ್ದಾರೆಂದು ಕೇಳಿದಾಗ ಅಲ್ಬುಕರ್ಕ್ ಅವರಿಗೆ ಸರ್ಟಿಫಿಕೇಟ್ ಕೊಡುವುದಕ್ಕೆ ಹೋಗಿದ್ದಾರೆಂದು ಹೇಳಿದರು.

Mr. SPEAKER.—Will the member read the motion or shall I read it ?

Sri P. V. AITHALA.—Yes, Sir.

Mr. SPEAKER.—The motion reads thus :

" I hereby give notice of my desire to raise today a question of breach of privilege of a Member of the Mysore Legislative Assembly arising out of wanton refusal on the part of the Leader of the House in refusing to give an interview to the elected Member of Surathkal Constituency while camping in Mangalore on 1-10-1967 although an interview was previously fixed by the Deputy Commissioner of the District and the interview was sought to represent the grievances of the people of Panambur in Surathkal Constituency whose hearths and homes were proposed to be taken possession of by the Government with police aid."

The privilege that the member is claiming is that the Chief Minister refused to grant him an interview. I would like to know what he has got to say in support of it. Privilege must be a privilege known to the Assembly. If every Member comes and says I want an interview and he must receive me, otherwise it comes as a breach of privilege, and it will be a breach of privilege of the House, he should please give me any authority in support of it.

Sri P. V. AITHALA.—Rule 179 says :

" The right to rise a question of privilege shall be governed by the following conditions, namely :—

(i) not more than one question shall be raised at the same sitting ;

(ii) the question shall be restricted to a specific matter of recent occurrence ;

(iii) the matter requires the intervention of the Assembly,"

ಏಕೆಂದರೆ ಇಷ್ಟು ದೊಡ್ಡ ಘನವಾದ ವಿಷಯದಲ್ಲಿ.....

Mr. SPEAKER.—I am not asking the Hon'ble Member to give the reason; but let him satisfy me about the privilege which he has got, namely that a Chief Minister is bound to receive a Member when he says 'I want to see you'.

ಶ್ರೀ ಪಿ. ವಿ. ಐತಾಳ.—ನಾನು ಈ ಘನ ಸಭೆಯ ಸದಸ್ಯನಾಗಿಲ್ಲದೆ ಇದ್ದರೆ ಶ್ರೀಮಾನ್ ನಿಜಲಿಂಗಪ್ಪನವರು ನನಗೆ ಭೇಟಿ ಕೊಡುತ್ತಿದ್ದರು. ನಾನು ಎದುರು ಪಕ್ಷದ ಸದಸ್ಯನೆಂದು ನನಗೆ ಇಂಟರವ್ಯೂ ಕೊಡಲಿಲ್ಲ. ಇದು ಒಂದು ಕಾರಣ. ಅಲ್ಲದೆ ಚುನಾವಣೆಗಳಲ್ಲಿ ನನ್ನ ಪ್ರತಿಸ್ಪರ್ಧಿಯಾಗಿದ್ದ ಶ್ರೀ * * * ಮತ್ತು ಡಿ.ಸಿ.ಸಿ. ಪ್ರೆಸಿಡೆಂಟ್ ಇವರಿಬ್ಬರೂ ಸೇರಿ.....

Mr. SPEAKER.—Members should not bring in names of persons who are not here. Refereuce made to persons who are not here will be expunged.

ಶ್ರೀ ಪಿ. ವಿ. ಐತಾಳ.—ಅವರೇ ನನಗೆ ಇಂಟರವ್ಯೂ ಕೊಡದ ಹಾಗೆ ಮಾಡಿದವರು. ನಾನೂ ಸ್ವಲ್ಪ ಪೊಸ್ಟೀಜ್ ಇದ್ದವ. ಒಬ್ಬ ವಕೀಲನಾಗಿ ನಾನು ಜೀವನ ಮಾಡುತ್ತಿದ್ದೇನೆ. ವಕೀಲನಾಗಿ ಮುಖ್ಯ ಮಂತ್ರಿಗಳು ನನಗೆ ಖಂಡಿತವಾಗಿ ಇಂಟರ್‌ವ್ಯೂ ಕೊಡುತ್ತಿದ್ದರು. ನಾನು ವಿಧಾನ ಸಭಾ ವಿರೋಧ ಪಕ್ಷದ ಸದಸ್ಯ ಎನ್ನುವಕಾರಣದಿಂದ ನನಗೆ ಇಂಟರ್‌ವ್ಯೂ ಕೊಡಲಿಲ್ಲವೆಂದು ಹೇಳುತ್ತೇನೆ.

Mr. SPEAKER.—I think the member has heard me say: "Members should not drag in names of persons who are not here to defend themselves". Again he is repeating—either he does not hear or heed to what I say.

ಶ್ರೀ ಪಿ. ವಿ. ಐತಾಳ.—ಇಡೀ ದೇಶದಲ್ಲಿರುವ ಎಲ್ಲ ಪ್ರಜೆಗಳಿಗೂ ಕೂಡ ಅವರು ಮುಖ್ಯ ಮಂತ್ರಿಗಳಾಗಿರುವುದರಿಂದ ವಿರೋಧ ಪಕ್ಷದವರಿಗೂ ಮತ್ತಿತರ ಎಲ್ಲ ಪ್ರಜೆಗಳಿಗೂ ಕೂಡ ಅವರು ಇಂಟರ್‌ವ್ಯೂ ಕೊಡಲು ಅವಕಾಶಕೊಡಬೇಕು. * * * * ಹೆಸರಿನಲ್ಲಿ.....

Mr. SPEAKER.—How many times am I to tell the House or this particular Member not to bring in names of persons who are not here? Does he not understand that much? He must kindly remember that just because a member has got the right to say that he can ignore all the rules. Did I not tell Sri Gopala Gowda a little earlier about this? Please satisfy the House, satisfy me about the privilege motion so that I may give consent or refuse it?

Sri H. SIDDAVEERAPPA.—It is not merely the question of privilege of any member as a matter of right seeking an interview with the Chief Minister; under the Constitution, the Chief Minister is the representative of the entire State as the Leader of the House, and he goes there by virtue of his office as Chief Minister. Let us not forget that he goes there at the cost of the public exchequer and the money that comes for his expenditure, whenever he goes out, is from the public funds. Therefore, the member, as a representative of the public and as a representative of that constituency, has every right, an inherent right to represent their grievances to the Chief Minister as the Head of the State whenever he goes. He did not go there for any private affair. He wanted an interview; without an interview he cannot explain. If, what the Hon'ble Member says is correct, then the interview, if it is denied, is really affecting the privilege of a Member of this House,

**** Matter expunged or not recorded as ordered by the Chair.

(SRI H. SIDDAVEERAPPA)

because he will be deprived of an opportunity of representing the grievances of the public. If that is so, he has the right to say that it is a breach of privilege.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಜಿಲ್ಲಾಧಿಕಾರಿಗಳು ಮುಖ್ಯಮಂತ್ರಿಗಳನ್ನು ನೋಡಬಹುದು ಎಂದು ಹೇಳಿದಮೇಲೆ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು.—ಅದು ಹಕ್ಕುಬಾಧ್ಯತೆಯ ಲೋಪವಾಗುತ್ತದೆಯೇ?

ಶ್ರೀ ಎಸ್. ಗೋಪಾಲಗೌಡ.—ಹೌದು. ಈ ಮನೆಗೆ ಸಂಬಂಧಪಟ್ಟ ಅಧ್ಯಕ್ಷರು, ಸದಸ್ಯರು ಮತ್ತು ಇಲ್ಲಿ ಕೆಲಸಮಾಡುವ ನೌಕರರ ಹಕ್ಕುಭಾಧ್ಯತೆಗಳು ಕೆಲವು ಬರವಣಿಗೆಯಲ್ಲಿವೆ ಕೆಲವು ಸಂಪ್ರದಾಯದ ರೀತಿಯಲ್ಲಿವೆ.

ಅಧ್ಯಕ್ಷರು.—ಅದು ಯಾವುದರಲ್ಲಿ ಬರೆದಿದೆ?

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ನಾನು ನಾಳೆ ತಮ್ಮ ಮಾರ್ಷಲ್ಲನ್ನ ದಬ್ಬರೇ? ಮೀಸೆ ಹಿಡಿದು ಹೊರಗೆ ಹಾಕರೇ?

ಅಧ್ಯಕ್ಷರು.—ನಾನು ಒಂದು ಪ್ರಶ್ನೆ ಹಾಕಿದರೆ ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆ ಹಾಕಿದರೆ ಹೇಗೆ?

ಶ್ರೀ ಎಸ್. ಗೋಪಾಲಗೌಡ.—ಬರೆದಿರುವುದನ್ನು ನೋಡಬಹುದು.

ಪ್ರಿವಿಲೇಜಸ್ ಏನು ಎಂಬುದು ಇನ್ನೂ ಕೋಡಿಫೈ ಆಗಿಲ್ಲ. ಪಾರ್ಲಿಮೆಂಟ್‌ನಲ್ಲೂ ಕೂಡ ಈ ಪ್ರಶ್ನೆ ಬಂದಾಗ ಕೋಡಿಫೈ ಮಾಡುವುದು ಬೇಡ, ಮಾಡಿದರೆ ಕಷ್ಟವಾಗುತ್ತದೆ ಎಂಬ ಅಭಿಪ್ರಾಯ ಬಂತು. ಸಾಮಾನ್ಯ ಅರ್ಥದಲ್ಲಿ ಬೇರೆ ಕಾನೂನಿಗಿಂತ ಇದಕ್ಕೆ ಒಂದು ಸ್ಥಾನಮಾನ ಇದೆ. ಮರ್ಯಾದೆ ಇದೆ. ಈಗ ಸಿ. ಐ. ಸಿ. ಅಂತ ಇದೆ, ಪ್ರೊಟೋಕೋಲ್ ಅಂತ ಇದೆ ಇದಕ್ಕೆ ಸಂಬಂಧಪಟ್ಟಂತೆ ಯಾವುದೂ ಕೂಡ ಬರೆದಿಡಲ್ಪಟ್ಟಿಲ್ಲ. ಈ ದೇಶದಲ್ಲಿ ಎಂ. ಎಲ್. ಎ. ಏನು ಕೆಲಸ ಮಾಡಬೇಕೆಂಬುದನ್ನು ಯಾವುದರಲ್ಲೂ ಬರೆದಿಟ್ಟಿಲ್ಲ. ಐದು ವರ್ಷ ಸುಖವಾಗಿ ಇಲ್ಲಿಗೆ ಬಂದು ರುಜುಹಾಕಿ ಹೊರಟುಹೋಗಬಹುದು. ಒಬ್ಬ ಮಾನ್ಯ ಸದಸ್ಯರು ಅವರ ಕ್ಷೇತ್ರಕ್ಕೆ ಮುಖ್ಯಮಂತ್ರಿಗಳು ಹೋದಂತ ಸಂದರ್ಭದಲ್ಲಿ ಸಾರ್ವಜನಿಕ ವಿಷಯವನ್ನು ಅವರಿಗೆ ತಿಳಿಸಬೇಕಾದ ಅವಶ್ಯಕತೆ ಇದೆ ಎಂದು ಕೇಳಿಕೊಂಡಾಗ್ಯೂ ಕೂಡ ಅವರನ್ನು ನೋಡುವುದಿಲ್ಲ ಎಂದರೆ ಬಹುಶಃ ಸ್ಯಾಮಿ, ತಾವೇ ಯೋಚನೆ ಮಾಡಿ, ಆ ಸದಸ್ಯನಿಗೆ ಏನಾದರೂ ಒಂದು ಗೌರವ ಸಿಕ್ಕುತ್ತದೆಯೇ ಅಥವ ಆತನ ಗೌರವಕ್ಕೆ ಚ್ಯುತಿ ಬರುತ್ತದೆಯೇ ಇಲ್ಲವೇ ಎಂಬುದನ್ನು ಹೇಳಿದರೆ ಈ ಪ್ರಶ್ನೆಯನ್ನು ನಾನು ಮತ್ತೆ ಪ್ರಸ್ತಾಪ ಮಾಡುವುದಿಲ್ಲ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನಲ್ಲಿ ನಮ್ಮ ಕ್ಷೇತ್ರಕ್ಕೆ ಪ್ರವಾಸ ಬಂದಿದ್ದಾಗ ಮಾನ್ಯ ಮಂತ್ರಿಗಳು ಡಿಫೀಟೆಡ್ ಕಾಂಗ್ರೆಸ್ ಕ್ಯಾಂಡಿಡೇಟನ್ನು ಕಾರಿನಲ್ಲಿ ಕೂಡಿಸಿಕೊಂಡು ಮೆರವಣಿಗೆ ಮಾಡಿಸಿದರು. ವಿರೋಧಪಕ್ಷದ ಎಂ. ಎಲ್. ಎ. ಯನ್ನು ಅವರ ಹತ್ತಿರ ಮಾತನಾಡುವುದಕ್ಕೂ ಕೂಡ ಅವಕಾಶ ಕೊಡಲಲ್ಲ. ನಾನು ಅವರನ್ನು ಮುಖ್ಯ ಮಂತ್ರಿಗಳಾಗಿ ರಿಸೀವ್ ಮಾಡುವುದಕ್ಕೆ ಹೋಗಿದ್ದೇನೆ ಹೊರತು ನಿಜಲಿಂಗಪ್ಪನವರು ಎಂದು ಅವರನ್ನು ರಿಸೀವ್ ಮಾಡಲಿಕ್ಕೆ ಹೋಗಿರಲಿಲ್ಲ, ಈ ರೀತಿ ಅವರನ್ನು ನೋಡುವುದಕ್ಕೆ ಅವಕಾಶ ಕೊಡದೇ ಅಸಭ್ಯ ರೀತಿಯಲ್ಲಿ ವರ್ತನೆ ಮಾಡಿದ್ದು ಪ್ರಜಾಪ್ರಭುತ್ವಕ್ಕೆ ಅಸಭ್ಯತೆಯನ್ನು ತೋರಿಸಿದಂತಾಯಿತು ಎಂದು ನಾನು ತಿಳಿದುಕೊಂಡಿದ್ದೇನೆ. ಕಾಂಗ್ರೆಸ್ ಸದಸ್ಯರೇ ಆಗಲಿ, ವಿರೋಧಪಕ್ಷದ ಸದಸ್ಯರೇ ಆಗಲಿ ಎಲ್ಲರನ್ನೂ ಸಮದೃಷ್ಟಿಯಿಂದ ನೋಡಬೇಕೇ ಹೊರತು ಈ ರೀತಿ ವರ್ತಿಸಬಾರದು ಎಂದು ಹೇಳುತ್ತೇನೆ. ಇನ್ನೊರ್ವರೇ ಅವರು ದೊಡ್ಡ ಗದ್ದುಗೆ ಏರಿ ಕಾಂಗ್ರೆಸ್ ಅಧ್ಯಕ್ಷರಾಗುವವರಾಗಿದ್ದಾರೆ, ಅವರು ಇಂತಹ ಭಾವನೆಗಳಿಗೆ ಅವಕಾಶ ಕೊಡದೇ ಇರಲಿ, ದೇವರು ಅವರಿಗೆ ಒಳ್ಳೆಯದನ್ನು ಮಾಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri P. V. AITHALA.—The Hon'ble Members will approach the Government when the House will not be in Session. The idea of approaching the Hon'ble Leader of the House is to get redressed the grievances. That is because the copies of tour programme of the

Ministers will be sent to all the M.L.As of the district. All the Officers of the Departments have been instructed to treat the M. L. As. with utmost courtesy and to look to their grievances. If the Ministers themselves are not observing this, how can we expect the Officers to receive them with all courtesy and all that ? Does it not amount to a question of privilege ?

ಶ್ರೀ ಎಸ್. ಶಿವಪ್ಪ.—ಇದು ಬಹಳ ವಿಶೇಷವಾದ ಸಂದರ್ಭ. ಒಂದು ದೇಶದ ಮುಖ್ಯ ಮಂತ್ರಿ ಮತ್ತು ಶಾಸನಸಭಾಸದಸ್ಯನಿಗೆ ಇರತಕ್ಕ ಒಂದು ಬಾಂಧವ್ಯಕ್ಕೆ ಸಂಬಂಧಿಸಿದುದು. ದೇಶದ ಮುಖ್ಯಮಂತ್ರಿ, ಶಾಸನಸಭಾಸದಸ್ಯನ ಬಗ್ಗೆ ಯಾವ ರೀತಿ ವರ್ತನೆ ಮಾಡಬೇಕು ಎಂಬ ಪ್ರಶ್ನೆ ಇದರಲ್ಲಿ ಅಡಗಿದೆ. ಸದಸ್ಯನ ಹಕ್ಕುಬಾಧ್ಯತೆಗೆ ಇದು ಸಂಬಂಧಪಡದೆ ಹೋದರೆ ಹಕ್ಕುಬಾಧ್ಯತೆ ಅನ್ನುವ ಶಬ್ದವನ್ನೇ ಕಿತ್ತುಹಾಕಿಬಿಡಬೇಕಾಗುತ್ತದೆ. ಒಂದು ಲಕ್ಷ ಪ್ರಜೆಗಳಿಂದ ಚುನಾಯಿತನಾಗಿ ಬಂದ ಶಾಸನಸಭಾಸದಸ್ಯನಿಗೆ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ತನ್ನಿಚ್ಛೆ ಬಂದಾಗ ಹೋಗಿ ಅವರೊಡನೆ ಮಾತನಾಡುವುದಕ್ಕೆ ಅವಕಾಶವಿಲ್ಲ ಎಂದರೆ ಅವನ ಹಕ್ಕುಬಾಧ್ಯತೆ ಮತ್ತು ಶಾಸನಸಭಾಸದಸ್ಯನಾಗಿ ಅತನ ಆತ್ಮಗೌರವ ಕೂಡ ಕುಂಠಿತವಾಗತಕ್ಕ ಸನ್ನಿವೇಶ ಇದೆ. ಇದು ಹಕ್ಕುಬಾಧ್ಯತೆಯ ಪ್ರಶ್ನೆಯಲ್ಲ ಎಂದರೆ ಇನ್ನಾವುದು ಹಕ್ಕುಬಾಧ್ಯತೆ ಎಂದು ಪ್ರಶ್ನೆಮಾಡುತ್ತೇನೆ. ಪ್ರಜಾಪ್ರಭುತ್ವದಲ್ಲಿ ಶಾಸನಸಭಾಸದಸ್ಯನ ಕರ್ತವ್ಯವೇನು, ಮುಖ್ಯಮಂತ್ರಿಯ ಕರ್ತವ್ಯವೇನು ಎಂಬುದಕ್ಕೆ ಇದು ಸಂಬಂಧಪಟ್ಟ ವಿಷಯವಾಗಿದೆ. ಇದನ್ನು ತಾವು ಸ್ವಲ್ಪ ಯೋಚನೆ ಮಾಡಿ. ದೇಶದ ಮುಖ್ಯಮಂತ್ರಿ ಯಾವಕ್ಷೇತ್ರಕ್ಕೆ ಹೋಗಿದ್ದಾರೆ ಆ ಕ್ಷೇತ್ರದ ಒಬ್ಬ ಸದಸ್ಯನನ್ನು ಕಡೆಗಣ್ಣಿನಿಂದ ಕಂಡರೆ ಅದು ಆತನ ಆತ್ಮಗೌರವಕ್ಕೆ ಕುಂಠಿತವಲ್ಲವೇ ? ಅವರ ಪಕ್ಷಕ್ಕೆ ಸೇರಿದವರನ್ನು ಮೆರವಣಿಗೆ ಮಾಡಿದರು ಎಂದರೆ, ತಾವು ಕಾಂಗ್ರೆಸ್ ಅಧ್ಯಕ್ಷರಾಗಿ ಹೋಗಿ ಮಾಡಿ ಬೇಡ ಎನ್ನುವುದಿಲ್ಲ, ಒಂದು ದೇಶದ ಮುಖ್ಯಮಂತ್ರಿಗಳಾಗಿ, ಚುನಾಯಿತರಾದ ಸದಸ್ಯರನ್ನು ಕಡೆಗಣ್ಣಿನಿಂದ ನೋಡುವುದು ಖಂಡಿತವಾಗಿಯೂ ನಿಮ್ಮ ಸ್ಥಾನಕ್ಕೆ ಗೌರವ ತರತಕ್ಕದ್ದಲ್ಲ. ಶಾಸನಸಭೆಗೇ ಅಗೌರವ, ಎಂದು ತಮ್ಮ ಮುಂದೆ ಹೇಳುತ್ತಾ ಇದ್ದೇನೆ. ಇದು ಗೌರವದ ಪ್ರಶ್ನೆ ಆತ್ಮಗೌರವದ ಪ್ರಶ್ನೆ ಮತ್ತು ಶಾಸನಸಭಾಸದಸ್ಯನಿಗೂ ಮುಖ್ಯಮಂತ್ರಿಗಳಿಗೂ ಇರತಕ್ಕ ಬಾಂಧವ್ಯದ ಪ್ರಶ್ನೆ. ಆದ್ದರಿಂದ ಇದನ್ನು ಹಕ್ಕುಬಾಧ್ಯತೆಯ ಪ್ರಶ್ನೆ ಎಂದು ಪರಿಗಣಿಸಿ ಹಕ್ಕು ಬಾಧ್ಯತೆಯ ಸಮಿತಿಗೆ ಕಳುಹಿಸಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಶ್ರೀಮಾನ್ ಐತಾಳರು ತಂದಿರುವ ಈ ಪ್ರಶ್ನೆ ಬರೀ ಊಹೆ, ಸತ್ಯವಾದುದಲ್ಲ ಎಂದು ಸೇಳುವುದನ್ನು ನಂಕಟದಿಂದ ಹೇಳುತ್ತಾ ಇದ್ದೇನೆ.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಇದು ಪ್ರಿವಿಲೇಜ್ ಮೋಷನ್ ಹೇಗೆ ಆಗುತ್ತದೆ ಅಂತ ತಿಳಿಸಿ ಅಂತ ತಾವು ಒಂದು ಮಹತ್ ಪ್ರಶ್ನೆ ಹಾಕಿದಿರಿ.

ಅಧ್ಯಕ್ಷರು.—ಈ ಸದಸ್ಯರಿಗೆ ನಾನು ಪ್ರಶ್ನೆ ಹಾಕಲಿಲ್ಲ.

ಶ್ರೀ ಅಜೀಜ್ ಸೇಟ್.—ತಾವು ನ್ಯಾಯದರ್ಶಿಗಳಾಗಿರುವುದರಿಂದ ಯಾವ ರೀತಿಯಲ್ಲೂ ಅನ್ಯಾಯವಾಗದೇ ಇರುವ ರೀತಿಯಲ್ಲಿ ಸದಸ್ಯರ ಹಕ್ಕುಭಾಧ್ಯತೆಯನ್ನು ಕಾಪಾಡಬೇಕಾದ ಮಹತ್ ಪ್ರಶ್ನೆ ಇದರಲ್ಲಿ ಇರುವುದರಿಂದ ದಯವಿಟ್ಟು ಇದಕ್ಕೆ ತಾವು ಅವಕಾಶ ಕೊಡಬೇಕು, ನಾನು ಹೆಚ್ಚು ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ, ನಾವೆಲ್ಲರೂ ಜನ ಸೇವಕರು, ಚೀಫ್ ಮಿನಿಸ್ಟರು ಈ ಮನೆಗೆ ಸೇವಕರು, ಈ ಮನೆಗೆ ನಾವೆಲ್ಲರೂ ಯಜಮಾನರು; ಮೆಂಬರುಗಳಿಗೆ ಬಹಳ ಅಧಿಕಾರ ಇದೆ, ಸದಸ್ಯರು ಇಚ್ಛೆಪಟ್ಟರೆ ಯಾವ ಸಮಯದಲ್ಲಾದರೂ ಚೀಫ್ ಮಿನಿಸ್ಟರು ಅವರಿಗೆ ನೋಡಲು ಅವಕಾಶ ಕೊಡಲೇಬೇಕು, ಅವರ ಸಮಸ್ಯೆಗಳಿಗೆ ಉತ್ತರ ಕೊಡಲೇಬೇಕು. ಅವರು ಚೀಫ್ ಮಿನಿಸ್ಟರ್ ಆಗಿ ಟೂರ್ ಮಾಡುತ್ತಾರೆಯೇ ವಿನಾ ಕಾಂಗ್ರೆಸ್ ಪಕ್ಷದವರಾಗಿ ಟೂರ್ ಮಾಡುವುದಿಲ್ಲ.....

Mr. SPEAKER.—Order, order.

ಶ್ರೀ ಅಜೀಜ್ ಸೇಟ್.—ನಾನು ಉಪದೇಶ ಮಾಡುವುದಕ್ಕೆ ನಿಂತಿಲ್ಲ, ಹಕ್ಕುಬಾಧ್ಯತೆ ಪ್ರಶ್ನೆ ಏನಿದೆ ಎಂದು ಕೇಳಿದಿರಿ ಅದಕ್ಕೆ ಹೇಳುತ್ತಾ ಇದ್ದೇನೆ.

Sri S. NIJALINGAPPA —Sir, it is likely that people may misunder stand me.

Sri Azeez Sait rose.

Mr. SPEAKER.—Order, order. I am not allowing the hon'ble Member to speak. There must be a limit.

(*Sri Azeez Sait again rose to speak*)

Now, members must heed to what I say; otherwise, I really do not know if the House is not anxious or members are not desirous that we must take up any other work. When I call the House to order, it has some meaning. The matter before us is with regard to a letter addressed by Sri Aithal. The procedure to be followed is, if at all, to hear him. I am not bound to hear anybody else. If I allowed the Leader of the Opposition, it was for the purpose of courtesy, to show him regard for the office he holds and to know whether he has anything new to add which I do not know and on which he might englighten me. Does it mean that every member has a right? The hon'ble Member Sri Azeez Sait gets up and goes on endlessly. Is it that I ring the bell for nothing? It will certainly not be possible to carry on with this kind of thing. Therefore, I allow one or two minutes, I do not want that they should feel that they have been shut out. If I allow one or two minutes and if I ring the bell twice or thrice, the member who is on his leg, if he does not head to the bell, he commits a contempt of the House. Generally speaking, ringing of the bell is for the purpose of bringing the House to order. I say I am not hearing Mr. Azeez Sait on this point. If at all there is an opportunity, I will give him ample time on some other occasion. Today with regard to this matter, I have heard. If the Chief Minister wants to say anything so that it may appear in the Press and the public may have full factual information on this matter, I will certainly permit him.

ಶ್ರೀ ಮಹದೇವ ಜಿ. ಬಣಕಾರ್.—ನಡೆದದ್ದೇ ದಾರಿ ಅಂತ ಹೇಳಿಬಿಡಿರಿ. ಅವರು ಹೇಳಿದ್ದೇ ಮಾತು.

Mr. SPEAKER.—Order, order. Sri Banakar, will kindly explain his conduct? He is simply getting up and saying whatever he wants to say. Did I call upon him? Does he not know that the Speaker must call upon a member to speak and before that he cannot speak? Till the Speaker permits, a member has no right to address.

(*Sri Banakar was standing*)

The hon'ble Member must resume his seat; if he cannot resume, let him retire from the House.

ಶ್ರೀ ವಾಟಾಳ್ ನಾಗರಾಜ್.—ತಾಪು ಕೋಪಿಸಿಕೊಂಡು ಮಾತನಾಡುತ್ತಾ ಇದ್ದೀರಿ, ನಮಗೆ ಕೋಪ ಬಹಳ ಜಾಸ್ತಿಯಾಗುತ್ತಾ ಇದೆ, ತಮ್ಮ ಕೋಪದಲ್ಲಿ ತಮ್ಮ ಕೈ ನಡುಗುವುದನ್ನು ನೋಡಿದರೆ ನಮಗೆ ಬಹಳ ವ್ಯಥೆಯಾಗುತ್ತದೆ ಇದರಲ್ಲಿ ಸದಸ್ಯರ ಗೌರವದ ಪ್ರಶ್ನೆ ಇದೆ ಆದ್ದರಿಂದ.....

Mr. SPEAKER.—Order, order. The hon'ble Member will retire from the House. There must be a limit.

(*Sri Vatal Nagaraj retired from the House*)

Mr. SPEAKER.—I do not understand the Hon'ble Member Sri Nanje Gowda speaking like this.

(*The Hon'ble Member persisted in speaking*)

Mr. SPEAKER.—The Member will apologise to the House or go out of the House.

2-30 P.M.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರಿಗೆ ನಾನು ಹೇಳುವುದರಿಂದೇನಾದರೂ ಅಪಘಾತವಾಗಿದ್ದರೆ ಅವರಲ್ಲಿ ನಾನು ಕ್ಷಮೆ ಕೇಳುತ್ತೇನೆ. ತಪ್ಪು ಮಾಡಿದ್ದರೆ ನಾನು ಕ್ಷಮೆ ಕೇಳಿಕೊಳ್ಳುತ್ತೇನೆ.

Mr. SPEAKER.—No conditional apology please. Does the Member realise that valuable time of the House is being wasted? I ask him, please do not disturb, let us do some work. I would appeal to the Members not to address the House till I have called upon them. That rule will be strictly enforced. If they speak, I direct the Reporters not to take down. I would if necessary appeal to the Press also to co-operate with me and not to take down. If in spite of this, Members persist in disturbing the proceedings, I will have to ask them to retire. Should you not give a patient hearing to all members; so many allegations have been made and the Chief Minister wants to say something.

Sri K. H. PATIL (Gadag).—Regarding the point about privilege motions, according to rule 183, the Speaker may issue such directions as may be necessary for regulating the business in connection with all matters connected with the consideration of the motion of privilege either in the Committee of Privileges or in the Assembly. In the absence of that, it has been the direction of the Speaker that every Member who feels that his legal right has been obstructed by any of the Ministers not in his individual capacity, but in his official capacity, in discharge of his duties as Chief Minister, at the cost of the State, then every Member must have a right and therefore in the absence of the rules, it is this House and this House alone which is competent to decide.

Mr. SPEAKER.—I reserve the ruling.

Sri K. H. PATIL.—Regarding the Press, it is the fundamental right of the Press to decide for itself what should be published in papers, and even within the House, with due respect to the Speaker, the Press is not under the control of the Speaker and any step to influence the Press to publish or not to publish a particular event relating to the Opposition, amounts to interfering with the liberty of the Press and it leads to the suppression of the publication of events that take place on the floor of the House. Therefore, I appeal to you, by way of raising this point of order, that the Speaker has no right to command the Press not to take down this or that. As far as official records are concerned, the Speaker is perfectly entitled to ask the Reporters not to take down what he considers not relevant. But as far as the Press is concerned, it is the

(SRI K. H. PATIL)

duty of the Press to report what it thinks best and they have that right. I therefore submit that the Speaker has no right whatever to command the Press to act in a particular way.

Mr. SPEAKER.—Ruling reserved.

ಶ್ರೀ ಎಸ್. ನಿಜಲಿಂಗಪ್ಪ.—ಸ್ಪಾಮಿ, ಮಾನ್ಯ ಸದಸ್ಯರು ನಾನು ಅವರಲ್ಲ ಅನಭ್ಯತೆಯಿಂದ ವರ್ತಿಸಿದ್ದೇನೆ ಎಂದು ಇಲ್ಲ ಹೇಳಿದ್ದಾರೆ. ಆದರೆ ಈ ಸಭೆಯು ಎಲ್ಲ ಸದಸ್ಯರಿಗೂ ಗೌರವ ಕೊಡುತ್ತಿರುವ ಹಾಗೆ ನಾವು ಪ್ರಜೆಗಳ ಪ್ರತಿನಿಧಿಗಳಾಗಿ ಬಂದು ಇಲ್ಲ ಕೆಲಸ ಮಾಡುತ್ತಿದ್ದೇವೆ. ಆದರೆ ಇಲ್ಲ ತಮಗೆ ಸಾಕಷ್ಟು ಗೌರವ ತೋರಿಸಲಲ್ಲ ಎನ್ನುವ ಒಂದು ಮಾತನ್ನು ಇಲ್ಲ ಹೇಳುತ್ತಿದ್ದಾರೆ. ಈ ತರಹದ ಅಪವಾದ ಬಹುಶಃ ನನ್ನ ಜೀವನದಲ್ಲ ಇದೇ ಮೊದಲನೆಯದು ಎಂದು ಕಾಣುತ್ತೆ. ಈಗ ಇಂತಹ ಆಕ್ಷೇಪಣೆಗಳು ಬರುತ್ತಿವೆ. ನಾನು ಎಂದೂ ಇಲ್ಲಿಯವರೆಗೆ ಯಾರನ್ನೂ ಅಗೌರವವಾಗಿ ಕಂಡಿಲ್ಲ. ಇಲ್ಲ ಹೇಳಿರುವ ಮಾನ್ಯ ಸದಸ್ಯರ ಬಗ್ಗೆ ಕೂಡ ನನಗೆ ಗೌರವವಿದೆ. ಅಷ್ಟೇ ಗೌರವ ಇತರ ಮಾನ್ಯ ಸದಸ್ಯರಿಗೂ ಕೊಡುತ್ತಿದ್ದೇನೆ. ಇದರಲ್ಲ ಯಾವ ಅಗೌರವವೂ ಆಗಿಲ್ಲ ಎಂದು ನಾನು ಭಾವಿಸಿದ್ದೇನೆ. ಅದರಲ್ಲೂ ಇದೇ ಮಾನ್ಯ ಸದಸ್ಯರು ಹಿಂದೆ ಕೂಡ ಬಡವರ ವಿಚಾರವಾಗಿ ಅನೇಕ ಕಾಗದಗಳನ್ನು ನನಗೆ ಬರೆದಿದ್ದರು ಮತ್ತು ಅವಕ್ಕೆ ನಾನು ಉತ್ತರಗಳನ್ನು ಕೂಡ ಕೊಟ್ಟಿದ್ದೇನೆ. ಅವೊತ್ತು ಕೂಡ ನಾನು ಸಂಬಂಧಪಟ್ಟ ಅಧಿಕಾರಿಗಳೊಡನೆ ಕುಳಿತು ಡಿರ್ಜೆ ಮಾಡಿ ಅಲ್ಲರುವ ಬಡ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ತಿಳಿಸಿಯೂ ಇದ್ದೆ. ಆದರೆ ಇದೇ ಮಾನ್ಯ ಸದಸ್ಯರು ಪುನಃ ನಾನು ಅಲ್ಲಗೆ ಬಂದಿದ್ದಾಗ ಒಂದು ಕಾಗದವನ್ನು ಬರೆದುಕೊಂಡು ಬಂದು ನನ್ನ ಬಳಿಗೆ ಒಂದು ಮೆಮೊರ್ಯಾಂಡಂನ್ನು ಕೊಡಬೇಕೆಂದು ಹೇಳಿದರು. ಇವರು ಕೂಡ ಒಳಗಡೆ ಬಂದು ನನ್ನ ಕೈಯಲ್ಲ ಒಂದು ಮೆಮೊರಾಂಡಂನ್ನು ಕೊಟ್ಟರು. ಅದನ್ನು ಕೊಡುವಾಗ ನನ್ನ ಜೊತೆಯಲ್ಲ ಇನ್ನೂ ಅನೇಕ ಜನರೂ ಕೂಡ ಒಳಗಡೆ ಬಂದರು. ಯಾರು ಬಂದು ಕಾಗದ ಕೊಟ್ಟರೂ ಅದನ್ನು ಬೇಡ ಎಂದು ನಾನು ಹೇಳುವುದಿಲ್ಲ.

(*Interruptions*)

ಶ್ರೀ ಬಿ. ಪಿ. ಗಂಗಾಧರ (ತುಮಕೂರು).—ಈಗಲಾದರೂ ತಾವು ಸತ್ಯವಾಗಿ ಹೇಳಿ. ತಮ್ಮ ಜೊತೆಯಲ್ಲಿ ಯಾರ್ಯಾರು ಬಂದಿದ್ದರು? ಎಲ್ಲೆಲ್ಲಿಗೆ ಹೋಗಿದ್ದರು? ತಾವು ಯಾವಾಗಲೂ ಬರೀ ಕಾಂಗ್ರೆಸ್ಸಿನವರನ್ನೆ ಕರೆದುಕೊಂಡು ಹೋಗುತ್ತೀರೇ ಹೊರತು ಇತರರು ಯಾರು ಬಂದರೂ ಕರೆದುಕೊಂಡು ಹೋಗುತ್ತಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಮಂತ್ರಿಗಳು ಹೇಳುತ್ತಿರುವುದೆಲ್ಲ ಬರೀ * * * ಯಾವುದನ್ನೂ ಇಲ್ಲ ನರಿಯಾಗಿ ಹೇಳುತ್ತಿಲ್ಲ.

Mr. SPEAKER.—Did the member say so? If so, it is unparliamentary. It may be deleted.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಆಗ ನನ್ನಲ್ಲಗೆ ಬಂದು ಅವರು ಬರೆದಿದ್ದ ಮೆಮೊರ್ಯಾಂಡಂನ್ನು ಕೊಟ್ಟರು. ಅದನ್ನು ನೋಡಿದ ಕೂಡಲೇ ಅವರಿಗೆ ನಾನು ಇದರ ಬಗ್ಗೆ ಆಗಲೇ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆಗಳನ್ನು ಕೊಟ್ಟು ಎಷ್ಟು ಅನುಕೂಲಗಳನ್ನು ಮಾಡಿಕೊಡಲು ಸಾಧ್ಯವೋ ಅಷ್ಟನ್ನು ಮಾಡಿ ಕೊಡಬೇಕೆಂದು ಹೇಳಿದ್ದೇನೆ ಎಂದು ಹೇಳಿದೆ. ಇದನ್ನು ಕೇಳಿಕೊಂಡು ಮಾನ್ಯ ಸದಸ್ಯರೂ ನನ್ನನ್ನು ನೋಡಿ ನಕ್ಕರು. ನಾನು ಕೂಡ ನಕ್ಕು ಸುಮ್ಮನಾದೆ. ಇಷ್ಟೇ ಆದ ವಿಚಾರಗಳು.

ಇದಾದ ಕೆಲವು ದಿನಗಳ ಮೇಲೆ ಅವರು ನನಗೆ ಒಂದು ಕಾಗದ ಬರೆದು, ಅದರಲ್ಲ ನನ್ನ ಬಗ್ಗೆ ಬಹಳ ಅಗೌರವವಾಯಿತು ಎಂದು ಬರೆದರು. ಇದರಂತೆಯೇ ನನ್ನ ಬಳಿಗೆ ಅನೇಕ ಜನ ಬರುತ್ತಾರೆ ಹೋಗುತ್ತಾರೆ. ನಾನು ಯಾರ ಬಗ್ಗೆ ಕೂಡ ಅಗೌರವವನ್ನು ತೋರಿಸಿಲ್ಲ ಮತ್ತು ಯಾರ ಹೆಸರನ್ನೂ ಹೇಳಲೂ ಇಲ್ಲ. ಅದರಲ್ಲೂ ನನ್ನ ಬಳಿಗೆ ಅನೇಕ ಜನ ಕಾಂಗ್ರೆಸ್ಸಿಗರೂ ಅಲ್ಲದೆ ಜನನಂಘದವರು ಬಂದಿದ್ದರು, ಪಿ.ಎಸ್.ಪಿ. ಪಕ್ಷಕ್ಕೆ ಸೇರಿದವರೂ ಬಂದಿದ್ದರು. ಹೀಗೆ ಎಷ್ಟೋ ಜನರು ಬಂದಿದ್ದರೂ ಕೂಡ ಅಂದು ಈ ಮಾನ್ಯ ಸದಸ್ಯರು ಒಳಕ್ಕೆ ನಾನಿರುವಾಗ ಬರಲಲ್ಲ. ಅದರೆ ನಾನು ಅಲ್ಲಂದ ಹೊರಡುವಾಗ ಮಾನ್ಯ ಸದಸ್ಯರಾದ ಶ್ರೀಮಾನ್ ಐತಾಳರವರು ಇನ್ನೂ ಅಲ್ಲೇ ಇರುವುದನ್ನು ನೋಡಿ

*** Matter expunged or not recorded as ordered by the Chair

ನಾನು ಅವರಿಗೆ ಈ ವಿಚಾರದಲ್ಲಿ ಸಹಾನುಭೂತಿಯಿಂದ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ತಿಳುವಳಿಕೆ ಕೊಡಲಾಗಿದೆ ಎಂದೂ ಹೇಳಿದೆ. ಇದರಿಂದ ಮಾನ್ಯ ಸದಸ್ಯರಿಗೆ ಸಮಾಧಾನವಾದ ಹಾಗೆ ಕಾಣಿಲಲ್ಲ ಎಂದು ತೋರುತ್ತದೆ. ಇದರಿಂದ ನಾನು ಯಾವ ರೀತಿಯಾದ ಅಗೌರವ ತೋರಿಸಿದೆ ಎನ್ನುವುದು ನನಗೆ ಗೊತ್ತಾಗಲಿಲ್ಲ. ಸರಕಾರದವರು ಇದರ ಬಗ್ಗೆ ಯೋಚನೆ ಮಾಡುತ್ತಿದ್ದಾರೆ ಎಂದು ಇವರಿಗೆ ಕಾಗದ ಬರೆದೂ ತಿಳಿಸಿದ್ದಾರೆ. ಇಷ್ಟೇ ನಡೆದದ್ದು.

ಅದರಲ್ಲೂ ಸಾಮಾನ್ಯವಾಗಿ ನಾನು ಎಲ್ಲಿಯೇ ಹೋಗಲೀ ಯಾರನ್ನೂ ನನ್ನೊಡನೆ ಬರ ಬೇಕೆಂದು ಕರೆದುಕೊಂಡು ಹೋಗುತ್ತಿಲ್ಲ. ಆದರೆ ಅವರಾಗಿಯೇ ನನ್ನೊಡನೆ ಬಂದರೆ ಬೇಡ ಎಂದೂ ಹೇಳುವುದಿಲ್ಲ. ಅಲ್ಲದೆ ಈ ಮಾನ್ಯ ಸದಸ್ಯರಿಗೆ ಅಗೌರವ ಮಾಡಬೇಕೆಂದು ನನ್ನ ಉದ್ದೇಶವೂ ಇಲ್ಲ. ಇದರಲ್ಲೂ ಈಚೆಗೆ ನಾನು ಮಂಗಳೂರಿಗೆ ಹೋದಾಗ ನನ್ನ ಸ್ನೇಹಿತರು ಅನೇಕರು ನನ್ನನ್ನು ನೋಡಬೇಕೆಂದು ಬಂದರು. ಅವರ ಜೊತೆಯಲ್ಲಿ ಇತರ ಜನರೂ ಬಂದದ್ದರು. ಪಿ.ಎಸ್.ಪಿ. ಪಕ್ಷದವರೂ ಬಂದಿದ್ದರು ಜನಸಂಘದವರೂ ಬಂದಿದ್ದರು, ನಿನ್ನೆ ಮೊನ್ನೆ ಕೂಡ ನಾನು ಮಂಗಳೂರಿಗೆ ಹೋಗಿದ್ದಾಗ ಅಲ್ಲಿ ಅನೇಕ ಜನರು ನನ್ನನ್ನು ನೋಡಲು ಬಂದರು. ಅಲ್ಲದೆ ಈಚೆಗೆ ಒಂದು ಸಭೆಯಲ್ಲಿ ನಾನು ಮಾತಾಡಲು ಹೋಗಿದ್ದಾಗ ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರೂ ಇದ್ದರು. ಅವರು ಮಾತನಾಡಿದರು. ನಾನೂ ಮಾತಾಡಿದೆ. ಇಬ್ಬರೂ ಅಲ್ಲಿ ಮಾತಾಡಿದೆವು. ಅವರಿಗೆ ನಾನು ಯಾವ ಅಗೌರವವನ್ನು ಕೂಡ ಮಾಡಿದಂತೆ ನನಗೆ ತೋರಲಿಲ್ಲ. ಅದು ಹೇಗೆ ಆಯಿತು ಎಂದು ಇಲ್ಲಿ ಹೇಳುತ್ತಾರೋ ನನಗೆ ಗೊತ್ತಿಲ್ಲ. ಈ ರೀತಿ ಸುಮ್ಮನೆ ನನ್ನಮೇಲೆ ದೋಷಾರೋಪಣೆ ಮಾಡುವುದು ಸರಿಯಲ್ಲ. ಮತ್ತು ಏತಕ್ಕಾಗಿ ಇಲ್ಲಿ ಹೀಗೆ ಮಾತಾಡುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅಲ್ಲದೆ ಈಚೆಗೆ ನನ್ನನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಿದರು ಎಂದು ಹೇಳುವುದಕ್ಕಾಗಿ ಇಲ್ಲ ಹೇಳಿದರೋ ಏನೋ ನನಗೆ ಗೊತ್ತಿಲ್ಲ. ಇದು ಬೇರೆ ವಿಚಾರ ಒಟ್ಟಿನಲ್ಲಿ ಯಾರಿಗೂ ಇದರಲ್ಲಿ ನಾನು ಅಗೌರವವನ್ನೇನೂ ಮಾಡಿಲ್ಲ.

ಶ್ರೀ ಸದಾಶಿವಪ್ಪ ಪಾಟೀಲ್.—ನಮ್ಮ ನೆರೆ ತಾಲ್ಲೂಕಿಗೆ ಮುಖ್ಯ ಮಂತ್ರಿಗಳು ಬಂದಿದ್ದಾಗ ಆ ಕ್ಷೇತ್ರದಲ್ಲಿ ಸೋತ ಕಾಂಗ್ರೆಸ್ ಅಭ್ಯರ್ಥಿಯೊಡನೆ ಮೆರವಣಿಗೆಯಲ್ಲಿ ತಮ್ಮ ಜತೆ ಕೂರಿಸಿಕೊಂಡು, ಮುಂದಿನ ಚುನಾವಣೆಯಲ್ಲಿ ಮರೆಯಬೇಡಿ ಎಂದು ತಮ್ಮ ಭಾಷಣದ ಕಾಲದಲ್ಲಿ ಜನರಿಗೆ ಹೇಳಲಿಲ್ಲವೇ ? ಅವರು ಇದ್ದರೆ ನಿಮ್ಮ ತಾಲ್ಲೂಕು ಅಭಿವೃದ್ಧಿ ಆಗುತ್ತದೆ ಎಂದು ಹೇಳಲಿಲ್ಲವೇ ?

Mr. SPEAKER.—Order, order,

ಶ್ರೀ ಸದಾಶಿವಪ್ಪ ಪಾಟೀಲ್.—ನಿಮ್ಮ ಜೊತೆಗೆ ಡಿವಿಜನಲ್ ಕಮೀಷನರ್, ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಇದ್ದರು. ಪಿ.ಡಬ್ಲ್ಯು.ಡಿ. ಮಿನಿಸ್ಟರ್‌ಗೆ ಇಂಟ್ರಡ್ಯೂಸ್ ಮಾಡಿದ್ದಾರೆ. ಆವಾಗ ನೀವು ಇರಲಿಲ್ಲವೇ ?

Mr. SPEAKER.—Order, order, I am not allowing Sri Nanje Gowda.

(*Sriyuths Ratnakumar Shetty, B. P. Gangadhar and Azeez Sait stood up*)

How many times are these members standing ? I have allowed once, twice, thrice. Order, order. The members will kindly resume their seats. I will read, what the hon'ble Member has written. This is what he has written in his letter :

> "The Chief Minister did not recognise me as M.L.A. and even did not show any courtesy to talk to me."

Does the hon'ble Member want all this to be published ? It is claimed as a privilege !

Sri H. SIDDAVEERAPPA.—The whole letter may be read, not one para.

Mr. SPEAKER.—Whatever comes uppermost to the mind, is let loose. I am sorry.

(*Sri Azeez Sait stand stood*)

(MR. SPEAKER)

The Member will not get up too frequently. He is getting up and sitting down often.

The allegations are that he thought that there was adverse attitude and hence there is a breach of privilege. I will examine the position very carefully.

Sri H. SIDDAVEERAPPA.—My friend has clearly stated in para 2 that he was invited. He went there on invitation and that is what happened.

Sri AZEEZ SAIT.—I have got a copy of that letter.

(Three Members stood)

Mr. SPEAKER.—Not three at a time. All the three members will sit down.

Sri H. SIDDAVEERAPPA—Here I request very earnestly the Members on the Treasury Benches to feel for themselves what the feelings on this side are with regard to this matter. Here I may state my own experience. Normally there are Ministers about whom, in fairness, I should not attribute any thing amounting to discourtesy, because when we have written to them, they have replied courteously. In particular, let me state my experience with the Chief Minister. Whenever I write to him, I do not receive a reply from him under his signature. Perhaps in his eyes, I am too small a man to send a reply. He sends a reply through his Private Secretary or somebody else that my letter is engaging attention of the Chief Minister. Thereafter, we do not hear what was the result of bestowing attention and what happened to the matter. Even in issuing that reply and the way in which they are worded the member has been slighted. He has, of course, a different treatment for his friends. For those whom he does not like, he acknowledges in the fashion I narrated. We have already stated that as a Leader of the House, he represents the entire State ; that is one thing that we accept. But it is not reflected in the conduct meted out to some of the hon'ble Members on this side. We know that there is a circular to the effect that whenever an M.L.A. goes to an Officer and meets him, the Member should be shown certain courtesies. There are some officials whom if I dub them as petty, I will not be wrong. When we meet them, they sit dilly-dallying their legs. We go to them only in the interests of the public. Even then, their conduct is such that we feel insulted ; we feel slighted by this cavalier behaviour. That probably is the reason for that Member drawing that inference. The other reason is the way in which the hon'ble Chief Minister treats others, namely, those whom he likes.

Sri S. NIJALINGAPPA.—I request the hon'ble Member to send me those replies.

Sri H. SIDDAVEERAPPA.—I will send. We have received replies from the Secretary.

Sri S. NIJALINGAPPA.—You may send them to me.

Mr. SPEAKER.—I thought that I was dealing with the question of privilege. Now we have gone on migrating round and ronnd and ventilated persona lfeelings, mutual courtesies and correspondence. Where are we from the question of privilege ?

Sri AZEEZ SAIT.—That is all privilege, Sir.

Mr. SPEAKER—The Member is talking through his hat.

ಶ್ರೀ ಬಿ. ಪಿ. ಗಂಗಾಧರ್.—ನಮ್ಮ ತಾಲ್ಲೂಕಿನ ವಿಚಾರವಾಗಿ ಏನೂ ಹೇಳಲಿಲ್ಲ. ಯಾವ ಮಂತ್ರಿಗಳಿಗೇ ಬರೆಯಲಿ receiving attention ಎಂದು ಹೇಳುತ್ತಾರೆ. ಅಲ್ಲಿಗೆ ಮುಗಿದು ಹೋಯಿತು. ಉತ್ತರ ಇರುವುದಿಲ್ಲ. ಇನ್ನು ಮೇಲಾದರೂ ಮುಖ್ಯ ಮಂತ್ರಿಗಳು ಅವರ ಕೊಲೀಗ್ ಗಳಿಗೆ ಈ ತರಹ ಮಾಡಕೂಡದು ಏನು ಅಕ್ಷನ್ ತೆಗೆದುಕೊಂಡಿದ್ದೀರಾ ತಿಳಿಸಿ ಎಂದು ಸೂಚನೆ ಕೊಡ ಬೇಕು.

ಶ್ರೀ ಪಿ. ವಿ. ಐತಾಳ.—ಸ್ವಾಮಿ, ಪಣಂಬೂರಿನಲ್ಲಿ ನಿರ್ಮಿತ ಜನರ ಕಷ್ಟನಷ್ಟಗಳನ್ನು ತಿಳಿಸಲು ಕಾಗದಗಳನ್ನು ಬರೆದಿದ್ದೇನೆ. ಒಂದು ಕಾಗದಕ್ಕೂ ಉತ್ತರ ಕೊಟ್ಟಿಲ್ಲ. ಮಂಗಳೂರಿನಲ್ಲಿ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಲು ಜಿಲ್ಲಾಧಿಕಾರಿಗಳ ಅನುಮತಿಯನ್ನು ಪಡೆದಿದ್ದರೂ ಅಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, ನಿರಾಕರಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, ಮುಖ್ಯ ಮಂತ್ರಿಗಳು ವಿಶ್ರಾಂತಿ ತೆಗೆದುಕೊಳ್ಳಲಿ, ವಿಶ್ರಾಂತಿ ರೂಮಿಗೆ ಹೋಗಲಿ ಎಂದು ಹೇಳಿದರು, ಹೌದೋ ಅಲ್ಲಪ್ಪೋ ಹೇಳಲಿ. ನಾನು ನಾಲ್ಕೂಕಾಲು ಗಂಟೆಯಿಂದ 5 ಗಂಟೆಯವರೆಗೂ ಕಾದು ಕುಳಿತಿದ್ದೆ, ಅವರಿಗೂ ಹೇಳಿದೆ: ನಾನು ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ರೂಮಿಗೆ ಹೋಗಲೆ ಎಂದು ಕೇಳಿದರೆ ನನ್ನನ್ನು ದೂಡಿಬಿಟ್ಟರು. ಮುಖ್ಯ ಮಂತ್ರಿಗಳ ಪರ್ಸನಲ್ ಅಸಿಸ್ಟೆಂಟ್ ಶ್ರೀಮಾನ್ ಚೆನ್ನವೀರಪ್ಪನವರು ಎರಡು ಸಾರಿ ಹೇಳಿದ್ದಾರೆ. ನನ್ನ ಪತ್ರವು ಇದೆ. ಸ್ವಾಮಿ, ನನ್ನ ಪತ್ರವನ್ನೂ ಒಂದು ಸಾರಿ ಓದಿ, ಮುಖ್ಯಮಂತ್ರಿಗಳ ಜವಾಬನ್ನೂ ಒಂದು ಸಾರಿ ಓದಿ.

PAPERS LAID ON THE TABLE

Mr. SPEAKER.—Now Papers to be laid on the Table.

Sri R. M. PATIL (Minister for Municipal Administration).—Sir, I beg to lay on the Table a copy of the City of Bangalore Municipal Corporation (Amendment) Ordinance, 1967, as required under article 213 (2) (a) of the Constitution of India.

(Interruptions)

Mr. SPEAKER.—Order, order.

Sri H. N. NANJE GOWDA.—On a point of order Sir.

ಮುಖ್ಯಮಂತ್ರಿಗಳು ಬರತಕ್ಕಂಥ ಕಾಲದಲ್ಲಿ ಏನೋ ಒಂದು ಒಳ್ಳೆಯ ವಾತಾವರಣ ಇದ್ದು ದನ್ನು ಕೆಡಿಸಿ ಬಂದರು. ಅವರು ಬಂದನಂತರ ಜನರಿಗೆ ಕೊರತೆ ಬಂತು.

Mr. SPEAKER.—Order, order. ಮುಖ್ಯಮಂತ್ರಿಗಳು ಬಂದಿದ್ದಮೇಲೆ ಶಿಕ್ಷಣ ಮಂತ್ರಿಗಳು ಬಂದಿದ್ದರಲ್ಲವೇ ? I will not allow the member to say anything except the point of order. If he says anything else, I will say that it is not to be taken down.

ಶ್ರೀ ಹೆಚ್. ಎನ್. ನಂಜೇಗೌಡ.—ಮುಖ್ಯಮಂತ್ರಿಗಳು ಬಂದು ಗಂಡಾಂತರ ಉಂಟು ಮಾಡಿ ಬಂದರು.